**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

## CC No.637/2020

ಸಾಕ್ಷಿಯನ್ನು ದಿಃ19.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ಸಾಕ್ಷಿಗೆ ಸದರಿ ಪ್ರಕರಣದಲ್ಲಿ ಹಾಜರು ಪಡಿಸಿರುವ ಒಂದು ಬಿಳಿ ಚೀಲ ಹಾಗೂ ಅದರಲ್ಲಿದ್ದ ಒಂದು ಹೈವಾರ್ಡ ಚಿಯರ್ ವಿಸ್ಕಿ ಪ್ಯಾಕೇಟುಗಳನ್ನು ತೋರಿಸಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು.ಮ-1 ಮತ್ತು 2 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ನನಗೆ ಮಾಹಿತಿ ಬಂದಾಗ ನಾನು ಠಾಣೆಯನ್ನು 2.30 ಗಂಟೆಗೆ ಹೊರಟಿರುತ್ತೇನೆ. ಪಂಚರಾದ ಚಾಸಾ-2, ಚಾಸಾ-3 ಹಾಗೂ ಸಿಬ್ಬಂದಿಗಳಾದ ಚಾಸಾ-4 ರಿಂದ 6 ರವರುಗಳು ಸ್ಥಳಕ್ಕೆ ಹೋಗಿರುತ್ತೇವೆ. ಚಾಸಾ-2 ಮತ್ತು 3 ರವರು ಕ್ರಮವಾಗಿ ಹುಣಸನಹಳ್ಳಿ ಹಾಗೂ ದೊಡ್ಡಗುಳಿ ಗ್ರಾಮದವರು ಎಂದರೆ ಸರಿ. ಠಾಣೆಯಿಂದ ಹುಣಸನಹಳ್ಳಿ ಗ್ರಾಮ ಸುಮಾರು 20 ಕಿ.ಮೀಟರ್ ಆಗುತ್ತದೆಂದರೆ ಸಾಕ್ಷಿಯು 10 ರಿಂದ 15 ಕಿ.ಮೀಟರ್ ಆಗಬಹುದು ಎಂದು ನುಡಿಯುತ್ತಾರೆ. ದೊಡ್ಡಗುಳಿ ಗ್ರಾಮ ಸುಮಾರು 7 ರಿಂದ 8 ಕಿ.ಮೀಟರ್ ಅಂತರದಲ್ಲಿರುತ್ತದೆಂದರೆ ಸರಿ. ಚಾಸಾ-2 ಮತ್ತು 3 ರವರನ್ನು ಕೋಡಿಹಳ್ಳಿ ಠಾಣೆಗೆ ಕರೆಸಿರುತ್ತೇವೆ. ಕೋಡಿಹಳ್ಳಿಯ ಬಸ್ ನಿಲ್ದಾಣದಿಂದ ಇವರುಗಳನ್ನು ಕರೆಸಿರುತ್ತೇವೆ. ನಾನು ಅವರಿಗೆ ಯಾವುದೇ ಲಿಖಿತ ನೋಟೀಸು ಕೊಟ್ಟಿರುವುದಿಲ್ಲ.

ನಾವು ಒಟ್ಟು 6 ಜನ ವಾಹನದಲ್ಲಿ ಹೋಗಿರುತ್ತೇವೆ. ಚಾಸಾ-4 ರಿಂದ 6 ಸದರಿ ದಿನ ಬೇರೆ ಕರ್ತವ್ಯವನ್ನು ಮುಗಿಸಿಕೊಂಡು ಠಾಣೆಯಲ್ಲಿದ್ದರು. ನಾವು ಸದರಿ ಗ್ರಾಮಕ್ಕೆ ಹೋದಾಗ 3 ಗಂಟೆಯಾಗಿತ್ತು. ಆರೋಪಿಯ ಪರಿಚಯ ನನಗೆ ಈ ಮುಂಚೆ ಇರಲಿಲ್ಲ. ಆರೋಪಿಯ ವಾಸದ ಮನೆ ಹಾಗೂ ಸದರಿ ಕೃತ್ಯ ನಡೆದ ಸ್ಥಳ ಒಂದೇ ಆಗಿರುತ್ತದೆ. ನಾನು ಸ್ಥಳಕ್ಕೆ ಹೋದಾಗ ಅವರು ಅಲ್ಲಿ ವಾಸವಿದ್ದರು. ನಾನು

ಮಹಜರ್ ನಲ್ಲಿ ಆರೋಪಿಯು ಆ ಸ್ಥಳದ ಎದುರುಗಡೆ ಹೊಸದಾಗಿ ಮನೆ ಕಟ್ಟುತ್ತಿರುವ ಬಗ್ಗೆ ಬರೆದಿರುತ್ತೇನೆ. ಸದರಿ ಗ್ರಾಮದವರನ್ನು ನಾವು ಆರೋಪಿಯ ಮನೆಯ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ ನೇರವಾಗಿ ನಮ್ಮ ಸಿಬ್ಬಂದಿಯಾದ ಚಾಸಾ-5 ರವರು ತೋರಿಸಿದಂತೆ ಸ್ಥಳಕ್ಕೆ ಹೋಗಿರುತ್ತೇವೆ.

ಸದರಿ ಅಂಗಡಿಯು ಶೀಟಿನ ಮನೆ ಆಗಿರುತ್ತದೆ. ಇದನ್ನು ಮಹಜರ್ ನಲ್ಲಿ ಬರೆದಿರುವುದಿಲ್ಲ. ಸದರಿ ಮನೆಯ ವಿಸ್ತೀರ್ಣ ಹಾಗೂ ಅಂಗಡಿಯ ಬಾಗಿಲು ಯಾವ ದಿಕ್ಕಿನಲ್ಲಿದೆ ಎಂದು ನಾನು ಮಹಜರ್ ನಲ್ಲಿ ಬರೆದಿರುವುದಿಲ್ಲ. ನಾನು ಸದರಿ ಸ್ಥಳಕ್ಕೆ ಹೋಗಿ ಸದರಿ ಅಂಗಡಿಯಿಂದ ಯಾವುದಾದರೂ ವಸ್ತುಗಳನ್ನು ಖರೀದಿಸಿದ ವ್ಯಕ್ತಿಗಳನ್ನು ಪರಿವೀಕ್ಷಣೆ ಮಾಡಿರುತ್ತೇನೆ. ನಾವು ಸರಿ ಸುಮಾರು 2 ರಿಂದ 5 ನಿಮಿಷಗಳ ಕಾಲ ವೀಕ್ಷಣೆ ಮಾಡಿರುತ್ತೇವೆ. ಸದರಿ ಅಂಗಡಿಗೆ ಒಂದೇ ಬಾಗಿಲು ಇತ್ತು. ನಾವು ಅಂಗಡಿಯ ಬಳಿ ಸೈಡಿನಲ್ಲಿ ನಿಂತುಕೊಂಡು ವೀಕ್ಷಣೆ ಮಾಡಿರುತ್ತೇವೆ. ನಾವು ಆತನನ್ನು ಅಂಗಡಿಯ ಒಳಗೆ ಇದ್ದಾಗ ಹಿಡಿಯಲು ಪ್ರಯತ್ನ ಮಾಡಿದೆವಾ ಎಂಬ ಪ್ರಶ್ನೆಗೆ ಸಾಕ್ಷಿಯು ನಮ್ಮನ್ನು ನೋಡಿ ಓಡಿ ಹೋಗಿರುತ್ತಾನೆಂದು ನುಡಿಯುತ್ತಾರೆ.

ಆರೋಪಿಗೆ ಆ ಸಮಯದಲ್ಲಿ 60 ವರ್ಷ ಆಗಿತ್ತು ಎಂದರೆಸ ರಿ. ಆರೋಪಿ ಊರಿನ ಒಳಗೆ ಓಡಿ ಹೋಗಿರುತ್ತಾನೆ. ಚಾಸಾ-5 ಮತ್ತು 6 ರವರು ಆರೋಪಿಯನ್ನು ಹಿಡಿಯಲು ಪ್ರಯತ್ನ ಮಾಡಿದರು. ಓಡಿ ಹೋಗಿದ್ದ ಅಸಾಮಿಯ ಬಗ್ಗೆ ಯಾರ ಬಳಿ ವಿಚಾರಣೆ ಮಾಡಿರುತ್ತೇನೆಂಬ ಪ್ರಶ್ನೆಗೆ ಸಾಕ್ಷಿಯು ಆತನ ಹೆಸರು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಅಂಗಡಿಯ ಒಳ ಪ್ರವೇಶ ಮಾಡುವ ಮುಂಚೆ ಶೋಧನಾ ವಾರೆಂಟ್ ತಯಾರು ಮಾಡಿರುವುದಿಲ್ಲ. ರೇಡ್ ಹೋಗುವ ಮುಂಚೆ ನ್ಯಾಯಾಲಯಕ್ಕೆ ಯಾವುದೇ ಮಾಹಿತಿ ಕೊಟ್ಟಿರುವುದಿಲ್ಲ. ಸದರಿ ಸ್ಯಾಚೆಟ್ ಗಳು ಹಾಲಿನ ಪಶ್ಚಿಮ ದಿಕ್ಕಿನಲ್ಲಿದ್ದವು. ಅವುಗಳು ತೆರೆದ ಬಾಕ್ಸನಲ್ಲಿದ್ದವು. ಈ ವಿಚಾರವನ್ನು ಮಹಜರ್ ನಲ್ಲಿ ಬರೆದಿರುವುದಿಲ್ಲ.

ಮು.ಮ-2 ರಲ್ಲಿ ಯಾವುದೇ ಪಂಚರ ಸಹಿ ಮಾಡಿಸಿರುವುದಿಲ್ಲ ಎಂದರೆ ಸರಿ. ಮು.ಮ-1 ರಲ್ಲಿ ಮೊಕದ್ದಮೆ ಸಂಖ್ಯೆ ಇರುತ್ತದೆ. ಸದರಿ ಮುಮ-1 ರಲ್ಲಿ ಇಬ್ಬರು ಸಾಕ್ಷಿಗಳ ಸಹಿ ಇರುತ್ತದೆ. ಮುಮ-1

ರಲ್ಲಿ ನನ್ನ ಸಹಿ ಇರುವುದಿಲ್ಲ ಎಂದರೆ ಸಾಕ್ಷಿಯು ಅದು ಹಾಕಲಾಗಿದೆ ಆದರೆ ಈಗ ಅಳಸಿಹೋಗಿದೆ ಎಂದು ನುಡಿಯುತ್ತಾರೆ. ಚಾಸಾ-2 ಮತ್ತು 3 ರವರ ಸಹಿ ಮಾತ್ರ ಇದ್ದು ವಿವರಣೆ ಯಾವುದು ಇರುವುದಿಲ್ಲ ಎಂದರೆ ಸರಿ. ಮು.ಮ-1 ಮತ್ತು 2ನ್ನು ಸ್ಥಳದಲ್ಲಿ ಅಮಾನತು ಪಡಿಸಿಕೊಂಡಿರುವುದಿಲ್ಲ, ಅವುಗಳನ್ನು ಠಾಣೆಯಲ್ಲಿ ಬನಾವಟ್ ಮಾಡಲಾಗಿರುತ್ತದೆಂದರೆ ಸರಿಯಲ್ಲ. ಎ ಅಕ್ಷರದ ಸೀಲನ್ನು ಪಂಚರಾದ ಚಾಸಾ-2 ರವರಿಗೆ ಕೊಟ್ಟಿದ್ದೇವು. ಸದರಿ ಸ್ಥಳದ ಪೂರ್ವಕ್ಕೆ ಆರೋಪಿ ಹೊಸದಾಗಿ ಕಟ್ಟುತ್ತಿದ್ದ ಮನೆ, ಪಶ್ಚಿಮಕ್ಕೆ ಗ್ರಾಮದ ರಸ್ತೆ, ಉತ್ತರ-ದಕ್ಷಿಣ ಕೋಡಿಹಳ್ಳಿ ಮತ್ತು ದೊಡ್ಡಗುಳಿ ಗ್ರಾಮದ ರಸ್ತೆಯಾಗಿರುತ್ತದೆ. ಸದರಿ ಚಕ್ಕುಬಂದಿಯನ್ನು ನಾನು ಮಹಜರ್ ನಲ್ಲಿ ಬರೆಸಿರುತ್ತೇನೆ. ನಾನು ಸ್ಥಳಕ್ಕೆ ಹೋಗಿ ಯಾವುದೇ ಮಹಜರ್ ಮಾಡಿರವುದಿಲ್ಲ ಯಾವುದೇ ವಸ್ತುಗಳನ್ನು ಅಮಾನತು ಪಡಿಸಿಕೊಂಡಿರುವುದಿಲ್ಲ, ಹಾಗೂ ಮಹಜರ್ ಬರೆದಿರುವುದಿಲ್ಲ ಅವುಗಳನ್ನು ಠಾಣೆಯಲ್ಲಿ ಬನಾವಟ್ ಮಾಡಲಾಗಿರುತ್ತದೆಂದರೆ ಸರಿಯಲ್ಲ. ಅದೇ ರೀತಿ ಮಹಜರ್ ಗೆ ಠಾಣೆಯಲ್ಲಿ ಸಹಿಗಳನ್ನು ಪಡೆದಿರುತ್ತೇನೆಂದರೆ ಸರಿಯಲ್ಲ. ಕೇವಲ ಆರೋಪಿಗೆ ತೊಂದರೆ ಮಾಡುವ ಉದ್ದೇಶದಿಂದ ಸುಳ್ಳು ವರದಿ ಕೊಟ್ಟಿರುತ್ತೇನೆಂದರೆ ಸರಿಯಲ್ಲ. ಆರೋಪಿಗೆ ಸಂಬಂಧಿಸಿದಂತೆ ಸ್ಥಳದಲ್ಲಿ ಯಾವುದೇ ಮನೆ ಅಥವಾ ಅಂಗಡಿ ಇರುವುದಿಲ್ಲ ಅದೇ ರೀತಿ ನಾನು ಸ್ಥಳಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**